**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.776/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಚಂದ್ರು ಶಂಕರಪ್ಪ ಮಡಿವಾಳರ | ಪಿಡಬ್ಲ್ಯೂ | 3 |
| ತಂದೆ:ಗಂಡನ ಹೆಸರು | : | ಶಂಕರಪ್ಪ | ಸಿಡಬ್ಲ್ಯೂ | 3 |
| ವಯಸ್ಸು | : | 45 ವರ್ಷ | | |
| ಉದ್ಯೋಗ | : | ಕೂಲಿ ಕೆಲಸ | | |
| ವಾಸ ಸ್ಥಳ | : | ಮಾರನಬೀಡ | | |

**ದಿನಾಂಕ:23-08-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನನಗೆ ಚಾಸಾ-1 ರವರು ಗೊತ್ತು. ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ, ಅದು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದೆ, ಸದರಿಯವರ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. 2015 ನೇ ಇಸ್ವಿಯಂದು ಪೊಲೀಸರು ಅಪಘಾತವಾದ ಸ್ಥಳಕ್ಕೆ ಬಂದು ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ಗಂಟೆ ಸಮಯದಲ್ಲಿ ಸ್ಥಳ ಪಂಚನಾಮೆ ಬರೆದರು. ಈಗ ತೋರುತ್ತಿರುವ ಪೋಟೋದಲ್ಲಿರುವ ವ್ಯಕ್ತಿ ನಾನೇ ಆಗಿರುತ್ತೇನೆ. ಆ ಪೋಟೊವನ್ನು ನಿ ಪಿ 3 ಎಂದು ಈಗಾಗಲೇ ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**<u>ಪಾಟೀ ಸವಾಲುಃ  ಸಹಾಯಕ ಸರಕಾರಿ ಅಭಿಯೋಜಕರಿಂದ</u>**

ದಿಃ30–11–2015 ರಂದು ಚಾಸಾ–9 ರವರ ಜಮೀನಿನ ಹತ್ತಿರ ಚಾಸಾ–1 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ–2 ರವರ ಸಮಕ್ಷಮ ಪೊಲೀಸರು ಅಪಘಾತಕ್ಕೆ ಸಂಬಂದಪಟ್ಟಂತೆ ನಿಪಿ 2 ರಂತಹ ಸ್ಥಳ ಪಂಚನಾಮೆ ಬರೆದರು ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ರೂ.200/–ಗಳ ಖರ್ಚು ಸಹಿತ ಕಾಲಾವಕಾಶವನ್ನು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್